ಭಾಗದಲ್ಲಿ ಹೆಚ್ಚಿನ ಪೋಲೀಸ್ ಸಿಬ್ಬಂದಿಯ ಅವಶ್ಯಕತೆ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(4) ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಮಾರುಕಟ್ಟೆ ಸೌಲಭ್ಯ.

ಶ್ರೀ ಎಂ. ತಮ್ಮಣ್ಣ:- ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯು ಬಹು ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಆದರಲ್ಲೂ ಖುಷ್ಕಿ ಪ್ರದೇಶದ ರೈತರು ಹೆಚ್ಚು ಈ ಬೆಳೆಯನ್ನು ಅವಲಂಬಿಸಿದ್ದಾರೆ. ತಾವು ಬೆಳೆದ ರೇಷ್ಮೆಗೂಡುಗಳನ್ನು ಪಕ್ಕದ ಚನ್ನಪಟ್ಟಣ ಮತ್ತು ರಾಮನಗರದ ರೇಷ್ಮೆಗೂಡಿನ ಮಾರುಕಟ್ಟೆಗೆ ಬಿಕರಿ ಮಾಡಲು ತೆಗೆದುಕೊಂಡು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಆದರೆ ಸೂಕ್ತ ಸಾಗಾಣಿಕೆ ವ್ಯವಸ್ಥೆ ಇಲ್ಲದೆ, ರೈತರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಮಂಡ್ಯ ನಗರದಲ್ಲಿ ಬೆಂಗಳೂರಿನಿಂದ ಬಂದು ರಾತ್ರಿ ತಂಗುವ ಬಸ್ಸುಗಳನ್ನು ಜಿಲ್ಲೆಯ ಕೊನೆ ಭಾಗಗಳಾದ ಕೌಡ್ಲೆ, ಬಸರಾಳು, ಮೇಲುಕೋಟೆ ಇನ್ನೂ ಮುಂತಾದ ಸ್ಥಳಗಳಲ್ಲಿ ರಾತ್ರಿ ತಂಗಿದ್ದು ಬೆಳಿಗ್ಗೆ ಬಸ್ಸುಗಳು ಹೊರಟರೆ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ವಿಶೇಷವಾಗಿ ರೈತರ ಅನುಕೂಲಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಬಸ್ಸುಗಳನ್ನು ಆಳವಡಿಸಿ ಸಾರಿಗೆ ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ಸಾರಿಗೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು), (ಸಾರಿಗೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮಂಡ್ಯಜಿಲ್ಲೆಯಲ್ಲಿ ಈ ಕೆಳಕಂಡ 3 ರಸ್ತೆ ಮಾರ್ಗಗಳನ್ನು ಮಾತ್ರ ರಾಷ್ಟ್ರೀಕರಣಗೊಳಿಸಿದೆ. ಅವುಗಳು (1) ಬೆಂಗಳೂರು-ಮೈಸೂರು ವಯಾ ರಾಮನಗರ, ಚೆನ್ನಪಟ್ಟಣ, ಮದ್ದೂರು ಮತ್ತು ಮಂಡ್ಯ. (2) ಮೈಸೂರು-ಚನ್ನರಾಯಪಟ್ಟಣ ವಯಾ ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಕೆ.ಆರ್.ಪೇಟೆ ಹಾಗೂ (3) ಮೈಸೂರು-ತಿಪಟೂರು ವಯಾ ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಬೆಳ್ಳೂರು ಮತ್ತು ತುರುವೇಕೆರೆ. ಈ ಮೇಲಿನ ಮಾರ್ಗಗಳನ್ನು ಹೊರತುಪಡಿಸಿ ಮಿಕ್ಕ ಮಾರ್ಗಗಳಲ್ಲಿ ಖಾಸಗೀ ವಾಹನಗಳು ಸಾರಿಗೆ ಸೇವೆಯ ಆಗತ್ಯವನ್ನು ಪೂರೈಸುತ್ತಿದೆ. ಕೌಡ್ಲೆ, ಬಸರಾಳು, ಮೇಲುಕೋಟೆ ಸ್ಥಳಗಳು ರಾಷ್ಟ್ರೀಕರಣ ಆಗದೇ ಇರುವ ಪ್ರದೇಶದಲ್ಲಿ ಇರುತ್ತದೆ. ಮಂಡ್ಯದಿಂದ ಮೇಲ್ಕಂಡ ಪ್ರದೇಶಗಳಿಗೆ ಸಾಕಷ್ಟು ಖಾಸಗೀ ವಾಹನಗಳು ಓಡಾಡುತ್ತಿವೆ. ಹಾಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬೆಂಗಳೂರಿನಿಂದ-ಮಂಡ್ಯಾಕ್ಕೆ 7 ರಾತ್ರಿ ತಂಗುವ ವಾಹನಗಳನ್ನು ಓಡಿಸುತ್ತಿದೆ. ಮಂಡ್ಯದಲ್ಲಿ ರಾತ್ರಿ ತಂಗುವ ಮೊದಲನೆ ವಾಹನವು ಬೆಂಗಳೂರನ್ನು ರಾತ್ರಿ 7.00 ಗಂಟೆಗೆ ಬಿಟ್ಟು ರಾತ್ರಿ 9.15 ಗಂಟೆಗೆ ಮಂಡ್ಯಾ ತಲುಪುತ್ತದೆ. ಕೊನೆಯ ಬಸ್ಸು ಬೆಂಗಳೂರಿನಿಂದ ರಾತ್ರಿ 10.30ಕ್ಕೆ ಬಿಟ್ಟು ಮಂಡ್ಯಾಕ್ಕೆ 0045ಕ್ಕೆ ಸೇರುತ್ತದೆ. ಎಲ್ಲಾ ರಾತ್ರಿ ತಂಗುವ ಬಸ್ಸುಗಳು ರಾತ್ರಿ 0.9.00ರ ಮೇಲೆ ಮಂಡ್ಯಕ್ಕೆ ಬರುತ್ತವೆ ಹಾಗೂ ಈ ಬಸ್ಸುಗಳು ಮಂಡ್ಯದಿಂದ ಬೆಳಿಗ್ಗೆ 6.30ರ ನಂತರ ಬಿಡುತ್ತವೆ ಬೆಂಗಳೂರಿಗೆ. ನಿಯಮ 15(2)ರ ಮೋಟಾರು ಕಾರ್ಮಿಕರ ಕಾಯ್ದೆ 1961ರ ಅನ್ವಯ ಪ್ರತಿಯೊಬ್ಬ ಚಾಲಕ ನಿರ್ವಾಹಕರಿಗೆ ಒಂದು ದಿನದ ಕರ್ತವ್ಯ ಮುಗಿದು ಮತ್ತೊಂದು ದಿನದ ಕರ್ತವ್ಯ ಆರಂಭವಾಗುವ ಮುನ್ನ 0900 ಗಂಟೆಗಳ ವಿಶ್ರಾಂತಿ ಕೊಡಬೇಕಾಗಿರುತ್ತದೆ.

ಇದರಿಂದಾಗಿ ಹಾಲಿ ಇರುವ ಬಸ್ಸುಗಳನ್ನು ಸಮಯ ಬದಲಾವಣೆ ಮಾಡದೆ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಹಾಲಿ ಸಂಚರಣೆಯಲ್ಲಿರುವ ಬಸ್ಸುಗಳ ವೇಳೆಗಳು ಸಾರ್ವಜನಿಕ ಪ್ರಯಾಣಿಕರ ಆಗತ್ಯಗಳನ್ನು ಪೂರೈಸುತ್ತಿದ್ದು ಚೆನ್ನಾಗಿ ಉತ್ತೇಜನಗೊಂಡಿವೆ. ಈ ವೇಳೆಗಳನ್ನು ಬದಲಾಯಿಸಿದಲ್ಲಿ ಹಾಲಿ ಉಪಯೋಗ ಪಡೆಯುತ್ತಿರುವ ಪ್ರಯಾಣಿಕರಿಂದ ದೂರುಗಳಿಗೆ ಆಸ್ಪದವಾಗುತ್ತವೆ. ಆದ್ದರಿಂದ ಈ ಬಸ್ಸುಗಳನ್ನು ವಿಸ್ತರಿಸುವುದು ಸೂಕ್ತವಲ್ಲ. ಈ ಹಳ್ಳಿಗಳಿಂದ

ಮಂಡ್ಯಾ ನಗರಕ್ಕೆ ಖಾಸಗೀ ಬಸ್ಸುಗಳನ್ನು ಓಡಿಸಲು ಖಾಸಗೀಯವರಿಗೆ ಪರವಾನಗಿಯನ್ನು ನೀಡುವ ವಿಚಾರವನ್ನು ಪರಿಗಣಿಸುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮಂಡ್ಯಾಕ್ಕೆ ಸರ್ಕಾರವು ಸೂಚನೆ ನೀಡುತ್ತದೆ.

(5) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಪುರಸಭೆಯ ಆಸ್ತಿಯಲ್ಲಿ ಅನಧಿಕೃತವಾಗಿ ಕಟ್ಟಡ ಕಟ್ಟುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ಚಿಕ್ಕನಾಯ್ಕನಹಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿ ಸುಮಾರು 9 ಗುಂಟೆ ಜಮೀನಿದ್ದು ಸದರಿ ಜಮೀನಿನ ಪೈಕಿ ಸುಮಾರು 0.5 ಗುಂಟೆ ಜಮೀನನ್ನು ಸ್ವಾತಂತ್ರ್ಯ ಹೋರಾಟಗಾರರಿಗೂ 0.2 ಗುಂಟೆ ಜಮೀನನ್ನು ನರಸಿಂಹಯ್ಯ ಎಂಬುವರಿಗೂ 0.01 ಗುಂಟೆ ಜಮೀನನ್ನು ರಸ್ತೆಗೂ ಜಿಲ್ಲಾಧಿಕಾರಿಗಳು, ತುಮಕೂರು ಕೆ.ಎ.ಟಿ. ತೀರ್ಮಾನದ ಮೇರೆಗೆ ಮಂಜೂರು ಮಾಡಿದ್ದು ಸದರಿಯವರು ಹಣ ಕೂಡ ಕಟ್ಟಿರುತ್ತಾರೆ. ಆದಾಗ್ಯೂ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಸದರಿ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುವ ದಿಸೆಯಿಂದ ಈಗಾಗಲೇ ಪಾಯ ತೋಡಿದ್ದು, ಕಲ್ಲು ಮಣ್ಣು ಜಮಾವಣೆ ಕೂಡ ಮಾಡಿರುತ್ತಾರೆ. ಇದು ಕಾನೂನಿಗೆ ವಿರೋಧ ಅಲ್ಲವೆ? ಹಾಗೂ ಕಾಂಗ್ರೆಸ್ ಸಂಸ್ಥೆಯವರಿಗೆ ಜಮೀನು ಮಂಜೂರು ಆಗದಿದ್ದಾಗ್ಯೂ ಅನಧಿಕೃತವಾಗಿ ಈ ಕೆಲಸ ಮಾಡಿ ಗೂಂಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿಲ್ಲವೆ? ಕಾಂಗ್ರೆಸ್‌ಗೆ ಸಾರ್ವಜನಿಕ ಸ್ಥಳವನ್ನು ಕೊಡುವುದಾದರೆ ಬೇರೆ ಪಕ್ಷಗಳಿಗೂ ಇಂಥಾದ್ದೇ ಅವಕಾಶ ಕಲ್ಪಿಸಿಕೊಡಲಾಗುವುದೆ? ಹಾಗೂ ಇದು ಸರ್ಕಾರದ ತೀರ್ಮಾನವಲ್ಲದಿದ್ದಲ್ಲಿ ತಕ್ಷಣ ಈ ಕೆಲಸವನ್ನು ನಿಲ್ಲಿಸಿ ಸಂಬಂಧಪಟ್ಟವರ ಮೇಲೆ ಕಾನೂನಿನ ರೀತಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಸಭಾಧ್ಯಕ್ಷರೆ ಇದಕ್ಕೆ ಉತ್ತರ ಸಿದ್ಧವಾಗಿಲ್ಲ. ಮಾನ್ಯ ಸದಸ್ಯರಿಗೆ ಅನಂತರ ಉತ್ತರವನ್ನು ತರಿಸಿ ಒದಗಿಸುತ್ತೇನೆ.

ಹಕ್ಕುಚ್ಯುತಿ ನಿರ್ಣಯಕ್ಕೆ ಅನುಮತಿ ಕೋರಿಕೆ

ಹಿಂದಿನ ಆರೋಗ್ಯ ಮಂತ್ರಿಗಳು ಅಂದಾಜು ಸಮಿತಿಯ ವಿರುದ್ಧ ಮಾತನಾಡಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಒಂದು ವಿಷಯವನ್ನು ತಮಗೆ ನಾನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಇವತ್ತು ಹೇಳಿಕೆಯನ್ನು ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು:- ಇವತ್ತು ಇನ್ನೂ ಮುಗಿದಿಲ್ಲ, ಇವತ್ತು ಈಗ ತಾನೆ ಪ್ರಾರಂಭವಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಪ್ರತ್ಯೇಕವಾಗಿ ಒಂದು ವಿಷಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಸಮಿತಿಯ ಬಗ್ಗೆ ಹಿಂದಿನ ಮಾನ್ಯ ಆರೋಗ್ಯ ಮಂತ್ರಿಗಳು ಅವರ ಮನಸ್ಸಿಗೆ ಬಂದಂತೆ ಮಾತನಾಡಿಕೊಂಡು ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಟ್ಟಿದ್ದರು. ತಾವು ಅಪ್ಪಣೆ ಕೊಟ್ಟರೆ, ಅದನ್ನು ಓದು ಎಂದರೆ ಓದುತ್ತೇನೆ. ಬಹುಶಃ ತಮ್ಮ ಹತ್ತಿರ ಕೂಡ ಆ ಪತ್ರಿಕಾ ಹೇಳಿಕೆ ಇದೆ. ಸಮಿತಿಯ ಬಗ್ಗೆ ಈ ರೀತಿ ಹಗುರವಾಗಿ ಮಾತನಾಡತಕ್ಕ ಹಕ್ಕನ್ನು ಅವರಿಗೆ ಯಾರೂ ಕೊಟ್ಟಿಲ್ಲವೆಂದು ಕಾಣಿಸುತ್ತದೆ. ಹಕ್ಕನ್ನು ಕೊಟ್ಟಿದೆ, ಆದ್ದರಿಂದ ಪರವಾಗಿಲ್ಲ ಎಂದು ಹೇಳುವುದಾದರೆ ಆಗಬಹುದು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಕಾನೂನು ಪ್ರಕಾರ ಸಮಿತಿಯ ಬಗ್ಗೆ, ಸಮಿತಿಯ ಅಧ್ಯಕ್ಷರ ಬಗ್ಗೆ ಸದನದಿಂದ ಹೊರಗಡೆ ಸ್ಟೇಟ್‌ಮೆಂಟನ್ನು ಕೊಡುವುದಕ್ಕೆ ರೂಲ್ಸ್ ಪ್ರಕಾರ ಅವಕಾಶವಿಲ್ಲ. ಆದರೂ ಅವರು ಪತ್ರಿಕೆಗೆ ಹೇಳಿಕೆಯನ್ನು